HALF-AN-HOUR DISCUSSION ARISING OUT OF REPLIES TO QUESTION No. 2 ON 3rd SEPTEMBER 1968 *re*: AMOUNTS PROVIDED FOR WELFARE OF SCHEDULED CASTES

Mr. SPEAKER.—Now the House will proceed to Half-an-hour discussion raised by Sriyuts : Arakeri, Jayaprakash Narayan, Jalisatgi, Duggappa, Nanje Gowda and Puttaranganath to raise a half-an-hour discussion on matters arising out of answers to Starred Question No. 2 (First List) regarding amount provided for welfare of Scheduled Castes.

The entire discussion has to be over in 30 minutes and the Members who want to speak may take five minutes each and not more than that.

Sri S. S. ARAKERI.—The time may be extended.

Mr. SPEAKER.—No. The Members' points have to be properly replied to. I shall therefore reserve ten minutes for the Hon'ble Minister and 20 minutes for the rest. The Chair does not desire to exceed half-an-hour. So only five minutes are allotted to each member.

† ಶ್ರೀ ಎಸ್. ಎಸ್. ಅರಕೇರಿ (ಬಳ್ಳೊಳ್ಳಿ).—ಮಾನ್ಯ ಸಭಾಪತಿಗಳೇ, 35ನೇ ಪ್ರಶ್ನೆಗೆ ಗುರುತಿನ ಪ್ರಶ್ನೆ ಸಭೆಯಲ್ಲಿ ಬಂದಾಗ ಅದಕ್ಕೆ ಉತ್ತರವಾಗಿ ಮಾನ್ಯ ಸಚಿವರು ಕೊಟ್ಟ ಉತ್ತರ ಸಮಾಧಾನಕರವಾಗಲಿಲ್ಲ, ಅದರ ಸಲುವಾಗಿ ಇವತ್ತಿನದಿವಸ ಅರ್ಧಗಂಟೆ ಕಾಲ ಚರ್ಚೆಗೆ ಅನುಮತಿ ಕೊಡಬೇಕೆಂದು ಕೇಳಿದ್ದರ ಮೇರೆಗೆ ತಾವು ಅನುಮತಿಯನ್ನು ಕೊಟ್ಟಿದ್ದೀರಿ, ಅದಕ್ಕಾಗಿ ತಮಗೆ ನನ್ನ ವಂದನೆಗಳನ್ನು ಅರ್ಪಿಸುತ್ತಾ ಇದ್ದೇನೆ. ಮಾನ್ಯ ಮಂತ್ರಿಗಳು ಒಂದು ಪಟ್ಟಿಯನ್ನು ಕೊಟ್ಟಿದ್ದಾರೆ. ಮೂರನೆ ಪಂಚವಾರ್ಷಿಕ ಯೋಜನೆಯಲ್ಲಿ ಹಿಂದುಳಿದವರ್ಗದವರ ಸಲುವಾಗಿ ಎಷ್ಟು ಹಣವನ್ನು ಇಟ್ಟಿದ್ದಾರೆ ಮತ್ತು ಎಷ್ಟು ಹಣ ಖರ್ಚಾಗಿದೆ ಎನ್ನುವಂತಹ ಮಹತ್ವದ ಪ್ರಶ್ನೆಯನ್ನು ಇಟ್ಟಾಗ ಅದರಲ್ಲಿ ಕೊಟ್ಟಿರುವುದನ್ನು ನೋಡಿದರೆ ಆ ಬಾಬಿನಲ್ಲಿ 20 ಲಕ್ಷ ರೂಪಾಯಿಗಳು ಲ್ಯಾಪ್ಸ್ ಆಗಿದೆ ಎಂಬುದು ಕಂಡುಬರುತ್ತದೆ. ಇದಕ್ಕೆ ಕಾರಣವೇನು ? ಶಿಕ್ಷಣದ ಮೇಲೆ ಸುಮಾರು 10 ಲಕ್ಷ ರೂಪಾಯಿಗಳು ಲ್ಯಾಪ್ಸ್ ಆಗಿದೆ. ಆರ್ಥಿಕ ಸಹಾಯ ಒದಗಿಸುವ ಸಂಬಂಧದಲ್ಲಿ 6 ಲಕ್ಷ ರೂಪಾಯಿಗಳನ್ನು ಲ್ಯಾಪ್ಸ್ ಮಾಡಿದ್ದಾರೆ. ಆರೋಗ್ಯ ಮತ್ತು ಹೌಸಿಂಗ್ ಸಲುವಾಗಿ ಸುಮಾರು 4 ಲಕ್ಷ ರೂಪಾಯಿಗಳನ್ನು ಲ್ಯಾಪ್ಸ್ ಮಾಡಿದ್ದಾರೆ. ಇದನ್ನೆಲ್ಲಾ ನೋಡಿದಾಗ 18-20 ಲಕ್ಷ ರೂಪಾಯಿಗಳು ಮೂರನೆ ಪಂಚವಾರ್ಷಿಕ ಯೋಜನೆಯಲ್ಲಿ ಲ್ಯಾಪ್ಸ್ ಆಗಿರುವುದು ಕಂಡುಬರುತ್ತದೆ. ಈ ರೀತಿ ಖರ್ಚು ಮಾಡದೇ ಇರಲಿಕ್ಕೆ ಕಾರಣವೇನು ಅಂದಾಗ ಮಾನ್ಯ ಸಚಿವರು ಕೊಟ್ಟ ಉತ್ತರವನ್ನು ನೋಡುವಾಗ ಬಹಳ ವಿಷಾದವಾಗುತ್ತದೆ. ಇದಕ್ಕೆ ಕಾರಣ ನಾನು ಹೇಳಬೇಕೆಂದರೆ ಅಧಿಕಾರಿಗಳ ತಪ್ಪಿನಿಂದ, ಅನಾದರಣೆಯಿಂದ ಇಷ್ಟು ಹಣ ಲ್ಯಾಪ್ಸ್ ಆಗಿದೆ ಎಂದು ಹೇಳಬೇಕಾಗುತ್ತದೆ. ಆ ಕಾಲದಲ್ಲಿ ಇದ್ದಂಥ ಮಂತ್ರಿಗಳು ಆಯಾಯಾ ಅಧಿಕಾರಿ ವರ್ಗಕ್ಕೆ ಸರಿಯಾದ ಸೂಚನೆಗಳನ್ನು ಕೊಡದೆ ಈ ಹಣವನ್ನು ಲ್ಯಾಪ್ಸ್ ಮಾಡಿದ್ದಾರೆ ಎಂದು ಇದರಿಂದ ಸ್ಪಷ್ಟವಾಗಿ ಕಂಡುಬರುತ್ತದೆ. ಮೈಸೂರು ರಾಜ್ಯದಲ್ಲಿ ನರ್ಸರಿ ಆಗಲಿ, ಹೈಸ್ಕೂಲು ಆಗಲಿ, ಕಾಲೇಜು ಆಗಲಿ ಆಯಾಯಾ ಮಟ್ಟದಲ್ಲಿ ಬೇಕಾದಷ್ಟು ಜನ ವಿದ್ಯಾರ್ಥಿಗಳು ಸ್ಕಾಲರ್‌ಷಿಪ್ ಸಲುವಾಗಿ, ಹಾಸ್ಟೆರ್ ಸಲುವಾಗಿ ಅರ್ಜಿಗಳನ್ನು ಹಾಕಿ ಎಷ್ಟೇ ಅಲೆದಾಡಿದರೂ ಕೂಡ ಅವರಿಗೆ ಸಿಕ್ಕಬೇಕಾದ ಸೌಲಭ್ಯ ಸಿಕ್ಕದೆ ಎಷ್ಟೋ ಜನ ಮಕ್ಕಳು ಶಿಕ್ಷಣವನ್ನು ಪಡೆಯಲಾರದೆ ಇವತ್ತಿನ ದಿವಸ ಇದ್ದಾರೆ. ಹಾಸ್ಟೆರ್‌ನೊಳಗೆ ಎಷ್ಟೋ ಜನ ಮಕ್ಕಳಿಗೆ ಜಾಗ ದೊರಕಲಲ್ಲ, ಸ್ಕೂಲುಗಳಿಗೆ ಮಕ್ಕಳು ಬರಲಲ್ಲ ಎಂಬುದನ್ನು ನೋಡಿದಾಗ ಬಹಳ ವಿಷಾದವಾಗುತ್ತದೆ. ಇದಕ್ಕೆ ಹೊಣೆಗಾರರು ಯಾರು ? ಸರ್ಕಾರದವರೇ. ಆಯಾಯಾ ಭಾಗಗಳಲ್ಲಿ ಇರುವಂತಹ ಸೋಷಿಯರ್ ವೆಲ್‌ಫೇರ್ ಇನ್‌ಸ್ಪೆಕ್ಟರ್‌ಗಳು, ಸೊಷಿಯರ್ ವೆಲ್‌ಫೇರ್ ಆಫೀಸರುಗಳು ಯಾರಿದ್ದಾರೆ ಅವರು ಇದಕ್ಕೆ ಹೊಣೆಗಾರರು, ಟೈಲರಿಂಗ್ ಸೆಕ್ಷನ್ ತೆಗೆದಿದ್ದೀರಿ, ಅದಕ್ಕೆ ಹೆಣ್ಣು ಮಕ್ಕಳು ಸೇರುತ್ತಾ ಇಲ್ಲ. ಕಾರಣವೇನೆಂದರೆ ಆ ವಿಷಯದಲ್ಲಿ ಸಾಕಾದಷ್ಟು ಪಬ್ಲಿಸಿಟಿ ಇಲ್ಲ. ತಾವು ಹೇಳುವ ಕಾರಣವೇನೆಂದರೆ ಬಿಲ್ಡಿಂಗ್ ಇಲ್ಲ, ಟೆಕ್ನಿಕರ್ ಹ್ಯಾಂಡ್ಸ್ ಇಲ್ಲ. ಆದ್ದರಿಂದ ಟ್ರೈನಿಂಗ್ ಕೊಡುವುದು ನಿಂತು ಹೋಯಿತು ಎಂದು ಹೇಳುತ್ತೀರಿ. ಅದು ಸರಿಯಾದ ಕಾರಣವಲ್ಲ, ಇವತ್ತಿನ

(ಶ್ರೀ ಎಸ್. ಎಸ್. ಅರಕೇರಿ)

ದಿವಸ ಎಷ್ಟೋ ಜನ ವಿದ್ಯಾವಂತರು ನಿರುದ್ಯೋಗಿಗಳಾಗಿ ಮೈಸೂರು ರಾಜ್ಯದಲ್ಲಿ ಓಡಾಡುತ್ತಾ ಇರುವಾಗ ಜೆಕ್ನಿಕಲ್ ಹ್ಯಾಂಡ್ಸ್ ಸಿಕ್ಕಲಿಲ್ಲ ಎಂದರೆ ಅರ್ಥವೇನು ? ಕಟ್ಟಡಕ್ಕಾಗಿ ಹಣ ಕೊಟ್ಟರೂ ಸಹ 5 ವರ್ಷದಿಂದ ಒಂದು ಹಾಸ್ಟೆಲ್ ಕಟ್ಟಡವನ್ನೂ ಕೂಡ ಕಟ್ಟಲಿಲ್ಲ. 20 ಲಕ್ಷ ರೂಪಾಯಿಗಳನ್ನು ರ್ಯಾಪ್ಸ್ ಮಾಡುವುದಕ್ಕೆ ಬದಲಾಗಿ ಕಟ್ಟಡಗಳನ್ನು ಕಟ್ಟಿಸಿದ್ದರೆ ಬೇಕಾದಷ್ಟು ಹಾಸ್ಟೆಲ್ ಕಟ್ಟಡಗಳು ಆಗುತ್ತಾ ಇದ್ದವು, ಮತ್ತು ಟ್ರೈನಿಂಗ್ ಸೆಂಟರುಗಳನ್ನು ತೆಗೆಯುವುದಕ್ಕೆ ಸಾಧ್ಯವಾಗುತ್ತಾ ಇತ್ತು. ಅದನ್ನೆಲ್ಲಾ ನೋಡಿದಾಗ ಹರಿಜನರ ಸಲುವಾಗಿ ಖರ್ಚು ಮಾಡಬೇಕಾದ ಹಣವನ್ನು ಅಧಿಕಾರಿಗಳು ಅಶ್ರದ್ಧೆ ಮಾಡಿ ಖರ್ಚು ಮಾಡಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಮನಸ್ಸು ಮಾಡಿದ ಹೊರತು ಈ ಜನರ ಉದ್ಧಾರವಾಗುವುದಿಲ್ಲ ಮತ್ತು ಭಾರತದ ಉದ್ಧಾರವಾಗುವುದಿಲ್ಲ ಎಂದು ಕಳಕಳಿಯಿಂದ ಹೇಳುತ್ತೇನೆ. ಸರ್ಕಾರ ಬೇಕಾದಷ್ಟು ದುಡ್ಡು ಕೊಡುತ್ತದೆ, ಎಲ್ಲ ನೆರವನ್ನೂ ಕೊಡುತ್ತದೆ ಆದರೆ ಅಧಿಕಾರಿಗಳು ಮನಸ್ಸು ಮಾಡದೇ ಇದ್ದರೆ ಏನೂ ಮಾಡುವುದಕ್ಕೆ ಆಗುವುದಿಲ್ಲ ಇದು ಮೊದಲನೆಯ ಅಂಶ. ಎಂಪ್ಲಾಯ್‌ಮೆಂಟ್ ಸೆಲ್ ತೆರೆದಿದ್ದಾರೆ. ಸೋಷಿಯಲ್ ವೆಲ್‌ಫೇರ್ ಡೈರೆಕ್ಟರು ರಿಜಿಸ್ಟರ್ ಮಾಡಿದ್ದನ್ನು ಎಲ್ಲಿಗೆ ಕಳಿಸಿದರೂ ಕೂಡ ಮಾನ್ಯತೆ ಕೊಡದೆ ಕೆಲಸ ಸಿಗುತ್ತಿಲ್ಲ. ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜಿಗೆ ಇರುವ ಮರ್ಯಾದೆ ಮತ್ತು ಸಾಕಷ್ಟು ಅಧಿಕಾರವನ್ನು ಈ ಸೆಲ್‌ಗೆ ಏಕೆ ಕೊಡಲಿಲ್ಲ ? ಹೀಗಾದರೆ ಈ ಎಂಪ್ಲಾಯ್‌ಮೆಂಟ್ ಸೆಲ್‌ನ ಉಪಯೋಗವೇನು ? 20 ಲಕ್ಷ ರೂಪಾಯಿ ರ್ಯಾಪ್ಸ್ ಆಗಿರುವುದಕ್ಕೆ ಕಾರಣ ತಿಳಿಸಬೇಕು. ಮುಂದೆ ಆ ರೀತಿ ಆಗದಂತೆ ನೋಡಿಕೊಳ್ಳಬೇಕು. ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಮತ್ತು ಉಪಮಂತ್ರಿಗಳು ಸ್ವಲ್ಪ ಆತ್ಮೀಯತೆಯಿಂದ ಬದಲಾವಣೆ ಮಾಡಿ ಸಾಕಷ್ಟು ಅನುಕೂಲವಾಗುವಂತೆ ಕೆಲಸಮಾಡುವ ಬಗ್ಗೆ ಭರವಸೆ ಕೊಡಬೇಕು.

† ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ಈ ಸಂಬಂಧದಲ್ಲಿ ಬಂದ ಪ್ರಶ್ನೆಗೆ ಸರಕಾರದವರು ಉತ್ತರ ಕೊಟ್ಟಿದ್ದಾರೆ, ಮುಖ್ಯವಾಗಿ ಶ್ರೀ ಅರಕೇರಿಯವರು ಹೇಳಿದ ಮಾತನ್ನು ನಾನು ಪುಷ್ಟೀಕರಿಸಬೇಕಾಗಿದೆ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ 20 ಲಕ್ಷ ರೂಪಾಯಿಗಳನ್ನು ಹರಿಜನರು, ಗಿರಿಜನರು, ಡೀ ನೋಟಿಫೈಡ್ ಗುಂಪಿನವರು ಮತ್ತಿತರ ವರ್ಗಗಳವರಿಗೆ ಖರ್ಚು ಮಾಡಬೇಕೆಂದು ಸರಕಾರ ಕೊಟ್ಟಿರುವ ಹಣವನ್ನು ಖರ್ಚುಮಾಡದೆ ಕಳೆದಿದ್ದಾರೆ ಆ ಸಂಬಂಧವಾಗಿ ಕೆಲವು ವಿವರಗಳನ್ನು ಕೊಟ್ಟಿದ್ದಾರೆ, ಖರ್ಚು ಕಡಮೆಯಾಗಿರುವುದಕ್ಕೆ ವಿದ್ಯಾ ಇಲಾಖೆಯವರು ಕೆಲವು ವಿವರಣೆಗಳನ್ನು ಕೊಟ್ಟಿದ್ದಾರೆ. ಅವರು ಕೊಟ್ಟಿರುವ ಕಾರಣಗಳು ಈ ರೀತಿ ಇವೆ :

> "There were less number of children in the Nurseries ; there were less number of boarders in the hostels ; equipment grants were below expectation ; response from students to join general hostels etc. etc."

ಈ ಸಭೆಯ ಅಧ್ಯಕ್ಷರು ಸಾರ್ವಜನಿಕ ಲೆಕ್ಕಪತ್ರ ತನಿಖೆ ಸಮಿತಿಯ ಅಧ್ಯಕ್ಷರಾಗಿ ಕೆಲಸಮಾಡಿದ್ದಾರೆ. ಅವರ ಗಮನಕ್ಕೆ ಇಂಥ ಕೆಲವು ಪ್ರಕರಣಗಳು ಬಂದಿವೆ. ಅಧಿಕಾರಿಗಳು ತಮ್ಮ ತಪ್ಪುಗಳನ್ನು ಮುಚ್ಚಿಕೊಳ್ಳುವುದಕ್ಕೆ ಬೇಕಾದ ವಿವರಣೆ ಕೊಟ್ಟಿದ್ದಾರೆ. ಅದರಲ್ಲಿ ಒಂದನ್ನು ಗಮನಕ್ಕೆ ತರುತ್ತೇನೆ. ಈ ಜನಾಂಗದ ಬಗ್ಗೆ ಸರಕಾರದವರು ಕಡು ಲೋಭತನದಿಂದ ವರ್ತಿಸಿದ್ದಾರೆಂಬುದರಲ್ಲಿ ನನಗೆ ಸಂದೇಹವಿಲ್ಲ. ಕೊಡುವ ಸಹಾಯ ನೋಡಿದರೆ ಅವರಲ್ಲಿ ಒಬ್ಬರಿಗೆ ಒಂದು ರೂಪಾಯಿ ಅಥವಾ ಎಂಟಾಣೆಯಾದರೂ ಬರುವುದೋ ಇಲ್ಲವೋ ಎಂಬ ಅನುಮಾನ ಇದೆ. ಅವರು ಬಡತನ, ವಾಸಮಾಡುವ ಸ್ಥಳ, ಅವರ ಕಸಬು, ಸಮಾಜದಲ್ಲಿ 5–6 ಸಾವಿರ ವರ್ಷಗಳಿಂದ ನಾನಾ ರೀತಿಯಲ್ಲಿ ಆರ್ಥಿಕ, ಸಾಮಾಜಿಕ ತೊಂದರೆಗಳಲ್ಲಿ ಅವರು ನರಳುತ್ತಿರುವುದು ಮುಂತಾದ್ದನ್ನು ಎಲ್ಲರೂ ನೋಡಿದ್ದೇವೆ. ಅವರು ಎಲ್ಲ ತರದ ತುಳಿತಕ್ಕೆ ಸಿಕ್ಕಿದ್ದಾರೆ. ಬಹುಶಃ ಭೂಮಿ ಇಲ್ಲದಿದ್ದರೆ ಅವರು ಭೂಮಿಯ ಕೆಳಕ್ಕೆ ಹೋಗುತ್ತಿದ್ದರೋ ಏನೋ. ಈಗ ಭೂಮಿ ಇದೆ, ಅದರ ತಳಕ್ಕೆ ಹೋಗಬೇಕಾದರೆ ಭೂಕಂಪವಾಗಬೇಕು. ಆ ಜನರನ್ನು ಇಷ್ಟು ತಳಕ್ಕೆ ತುಳಿದಿದ್ದಾರೆ. ಅವರನ್ನು ಮೇಲಕ್ಕೆತ್ತಿ ಅವರಿಗೆ ಯಾವುದಾದರೂ ಸರಿಯಾದ ಕೆಲಸ ಕೊಟ್ಟರೆ, ಅವರನ್ನು ಮನುಷ್ಯರನ್ನಾಗಿ ಮಾಡಿದರೆ ದೊಡ್ಡ ಪ್ರಗತಿಯಾದಂತಾಗುತ್ತದೆ. ಅವರಿಗೆ ಕೆಲವು ವಿಶೇಷ ಸೌಲತ್ತುಗಳನ್ನು ಕೊಡಬೇಕು. ಬಹಳ ಕಾಲದಿಂದ ಈ ಅಭಿಪ್ರಾಯವಿತ್ತು. ಯಾರನ್ನು ರಾಷ್ಟ್ರದ ಪಿತ ಎಂದು ಕರೆಯುತ್ತಿದ್ದರೋ ಆ ಮಹಾತ್ಮ ಗಾಂಧಿಯವರ ವಿಶೇಷ ಪ್ರಯತ್ನದಿಂದ ರಾಜ್ಯಾಂಗದಲ್ಲಿ ಅವರಿಗೆ ಕೆಲವು

ಅವಕಾಶಗಳನ್ನು ಮಾಡಿಕೊಟ್ಟಿದ್ದಾರೆ, ಹಾಗಿಲ್ಲದಿದ್ದರೆ, ಅವರಿಗೆ ಸರಿಯಾದ ನೆರವು ಇಷ್ಟು ಕೂಡ ದೊರೆಯುತ್ತಿರಲಿಲ್ಲ. ಪಂಚವಾರ್ಷಿಕ ಯೋಜನೆಯಲ್ಲಿ ಅವರಿಗಾಗಿ ಕೆಲವು ಕಾರ್ಯಕ್ರಮಗಳನ್ನು ಹಾಕಿದ್ದಾರೆ. ಅದೆಲ್ಲಾ ಸರಿಯೇ, ಇಲ್ಲವೆಂದು ಹೇಳುವುದಿಲ್ಲ. ಆದರೆ ಹರಿಜನರು, ಗಿರಿಜನರು ಮುಂತಾದ ವರ ಉದ್ಧಾರಕ್ಕೆ ಸರಿಯಾದ ಕೆಲಸವೇನೂ ಆಗಿಲ್ಲ. ಕುದುರೆಯ ಮುಂದೆ ಗಾಡಿ ನಿಲ್ಲಿಸುವ ಕೆಲಸ ಈಗ ನಡೆದಿದೆ. ಇದರಿಂದ ಪ್ರಯೋಜನವಿಲ್ಲ. ಶಾಲೆಗಳಿಗೆ ಹುಡುಗರೇ ಬರಲಿಲ್ಲ ಮುಂತಾದ ಕಾರಣ ಹೇಳುವುದು ಸರಿಯಲ್ಲ. ಪ್ರತಿಯೊಬ್ಬ ಅಧಿಕಾರಿಯೂ 30ನೆಯ ತಾರೀಖಿನ ದಿವಸ ತನ ಗೆಷ್ಟು ಬರುತ್ತದೆ ಎಂದು ಲೆಕ್ಕ ಹಾಕುತ್ತಾನೆ. ತನಗೆ ಸಂಬಳ ಜಾಸ್ತಿಯಾಗಬೇಕು, ಬೆಂಗಳೂರಿನಲ್ಲೇ ತಾನು ವಾಸಮಾಡಬೇಕು, ಕಛೇರಿಯ ಹತ್ತಿರವಿರಬೇಕು, ಮಕ್ಕಳು ಓದಲು ಅನುಕೂಲವಿರಬೇಕು ಎಂದು ಯೋಚನೆಮಾಡುತ್ತಾನೆ. ಅದೇ ರೀತಿ ಆ ಅಧಿಕಾರಿಗೆ ಹರಿಜನರ, ಬಡವರ ಸೇವೆ ಮಾಡಲು ಆಸಕ್ತಿಯಿರುವುದಿಲ್ಲ. ಈ ರೀತಿ ಇರುವುದರಿಂದ ಎರಡು ಶತಮಾನವಾದರೂ ಈ ಜನರು ಇದ್ದಲ್ಲೇ ಇರುತ್ತಾರೆ. ಅವರೇನು ಇಂದು ಪಾಯಖಾನೆ ಎತ್ತಿ ಸ್ವಾಮ್ಯಮೆಂಜರ್ ಕೆಲಸ ಮಾಡುತ್ತಿದ್ದಾರೋ ಅದನ್ನು ತಪ್ಪಿಸುವುದಕ್ಕಾಗುವುದಿಲ್ಲ. ಅವರಿಗೆ ಬಹಳ ಔದಾರ್ಯದಿಂದ ಕೊಡುವ ಹಾಗೆ 50 ರೂಪಾಯಿ ಸಂಬಳ ಕೊಡುತ್ತಾರೆ. ಅಗ್ನಿಹೋತ್ರಿಗಳ ಊರಿನಲ್ಲಿ 12 ರೂಪಾಯಿ ಸಂಬಳ ಇದೆ. ಇಂಥ ದುರವಸ್ಥೆಯಲ್ಲಿರುವವರಿಗೆ ಅಂತಃಕರಣ ಪೂರ್ವಕವಾಗಿ ಮನೆಗೆ ಹೋಗಿ ಸಹಾಯ ನೀಡಬೇಕು. ಒಂದು ದನ, ಒಂದು ಎತ್ತು ಕೊಟ್ಟರೆ ಹೇಗೆ ಬೇಸಾಯ ಮಾಡುವುದು ? ಇದೇನು ಹುಡುಗಾಟವೇ ! ಇಂಥ ನ್ಯೂನತೆ ಮೂಲ ಯೋಜನೆಯಲ್ಲಿದೆ. ಇನ್ನೂ ಇದನ್ನು ಸರಿಪಡಿಸುವುದಕ್ಕಾಗಿಲ್ಲ. ಹಣದ ಅನುಕೂಲ ಸಾಲದು, ಅದಷ್ಟು ಸಹಾಯ ಮಾಡುತ್ತಿದ್ದೇವೆ ಎಂದು ಹೇಳಬಹುದು. ಆದರೆ ಕೇವಲ 20 ಲಕ್ಷ ಕೊಟ್ಟರೆ ಅದರಲ್ಲಿ ಬಹು ಭಾಗವನ್ನು ಸಂಬಳಕ್ಕಾಗಿ ಖರ್ಚು ಮಾಡಿದರೆ, ಸರಿಯಾಗಿ ವಿನಿಯೋಗ ಮಾಡದಿದ್ದರೆ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗೆ ಏನು ಶಿಕ್ಷೆ ಕೊಟ್ಟರೂ ಕಡಮೆ. ಈಗ ಮನೆ ಕಟ್ಟಿಸುವ ಹೊಸ ಯೋಜನೆ ಬೇರೆ ಇದೆ. ಸೊಸೈಟಿ ಮಾಡಿ ಕೊಳ್ಳಿ, ಸಾಲ ಕೊಡುತ್ತೇವೆ, ಆಮೇಲೆ ತೀರಿಸಿ ಎಂದು ಹೇಳುತ್ತಿದ್ದಾರೆ. ಎಷ್ಟೋ ಜನರು ಸೊಸೈಟಿ ಮಾಡುವುದಾಗಿ ಹೇಳಿ ಹಣ ತೆಗೆದುಕೊಂಡು ಊರೇ ಬಿಟ್ಟು ಹೋಗಿದ್ದಾರೆ. ಹಣ ತಿಂದು ಹಾಕಿ ಕೆಲವರು ದೆಹಲಿಗೆ ಹೋಗಿ ಅಲ್ಲಿ ಇದ್ದಾರೆ. ಕೆಲಸಮಾಡಿದವರಿಗೆ ಸಂಬಳ ಕೊಡುವುದಾಗಿ ಹೇಳಿ ವರ್ಷಗಟ್ಟಲೆ ಯಾರಿಗೂ ಕೂಡದೆ ಅಧಿಕಾರಿಗಳೇ ತಿಂದಿರುವ ಸಂದರ್ಭಗಳಿವೆ.

ಶ್ರೀ ಬಿ. ದೊಡ್ಡಬೋರೇಗೌಡ (ಶ್ರೀರಂಗಪಟ್ಟಣ).—ಆಡಳಿತ ಪಕ್ಷದ ಅನುಯಾಯಿಗಳು ಷೇರು ಬಂಡವಾಳನ್ನು ತಿಂದುಹಾಕಿದ್ದಾರೆ. ಅವರಮೇಲೆ ಏನೂ ಕ್ರಮ ತೆಗೆದುಕೊಳ್ಳುವುದಕ್ಕಾಗಿಲ್ಲ

ಶ್ರೀ ಎಸ್. ಗೋಪಾಲಗೌಡ.—ನಾನು ಹೆಚ್ಚು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಎಷ್ಟು ಹೇಳಿದರೂ ಕಡಮೆ ಎಂದು ನನ್ನ ಅಭಿಪ್ರಾಯ. ಈ ಅಪರಾಧ ಮಾಡಿರತಕ್ಕ ಸರ್ಕಾರದವರು ಮತ್ತು ಅವರ ಸಿಬ್ಬಂದಿಯವರು ಏನು ವಿವರಣೆ ಕೊಟ್ಟರೂ ನಾನಂತೂ ಒಪ್ಪುವುದಕ್ಕೆ ತಯಾರಿಲ್ಲ. ಈ ಮನೆಯ ಸದಸ್ಯರು ಒಪ್ಪುತ್ತಾರೋ ಹೇಗೋ ಗೊತ್ತಿಲ್ಲ. ಇದು ದೊಡ್ಡ ಲೋಪ. ಇದು ಆಗದಂತೆ ನೋಡಿಕೊಳ್ಳಬೇಕು ಎಂಬುದು ನಮ್ಮ ವಿನಂತಿ. ಸಾಧ್ಯವಿದ್ದರೆ ಇದರ ಬಗ್ಗೆ ವಿಚಾರಣೆಗಳನ್ನು ಮಾಡಬೇಕು. ಕೆಲವು ಡೋಂಗಿ ಆದ ವಿವರಣೆಗಳನ್ನು ಏನು ಕೊಟ್ಟಿದ್ದಾರೆ ಅದನ್ನು ವಿವರಣೆಗಳು ಎಂದು ತಿಳಿಯುವುದಿಲ್ಲ. ಮನೆಗಳನ್ನು ಕಟ್ಟಿಸಿಕೊಡಬೇಕು ಎಂದು ಹೇಳುತ್ತಾರೆ. ಜಾಗ ಅಕ್ವೈರ್ ಮಾಡಿ ನೆಲಗಟ್ಟನ್ನು ಮಾಡಬೇಕು ಎನ್ನುವ ರೀತಿಯಲ್ಲಿ ಸೊಸೈಟಿಗಳನ್ನು ಮಾಡಿದರೆ ಏನು ಪ್ರಯೋಜನ ? ಎಲ್ಲಿ ಮನೆ ಕಟ್ಟಬೇಕು ಎನ್ನುವುದೇ ಪ್ರಶ್ನೆ ; ಅವರಿಗೆ ಜಮೀನು ಕೊಡುವುದು, ಕೈಗಾರಿಕೆಗಳಲ್ಲಿ ಅವರನ್ನು ಸ್ಥಾಪನೆ ಮಾಡುವುದು ಇವು ಯಾವುದನ್ನೂ ಮಾಡದೆ ತುಪ್ಪ ಮೂಗಿಗೆ ಹಚ್ಚತಕ್ಕ ಕಾರ್ಯಕ್ರಮಗಳಿಂದ ಇಷ್ಟೊಂದು ದೊಡ್ಡ ಪ್ರಮಾಣದ ಸಮಸ್ಯೆಯನ್ನು ನಾವು ಬಗೆಹರಿಸುತ್ತೇವೆಂದು ನನಗನ್ನಿಸಿಲ್ಲ. ಮಾನ್ಯ ಸದಸ್ಯರು ಯಾರಾದರೂ ಸಮಾಧಾನ ಪಟ್ಟುಕೊಂಡಿದ್ದರೆ, ನಾವು ಮಾಡುತ್ತ ಇರುವ ಕ್ರಮವು ನಮ್ಮಂತೆಯೇ ಈ ಜನರನ್ನೂ ಮೇಲೆ ಎತ್ತುವುದಕ್ಕೆ ಕರೆದುಕೊಂಡು ಹೋಗುತ್ತದೆ ಎಂದು ನಂಬಿದ್ದರೆ ಅವರು ದೊಡ್ಡ ಭ್ರಮೆಯಲ್ಲಿದ್ದಾರೆ ಎಂದು ಹೇಳುತ್ತೇನೆ.

ನಿಮ್ಮ ಅನ್‌ಟಚಬಿಲಿಟಿ ಕೂಡ ಹಳ್ಳಿಗಳಲ್ಲಿ ಹೋಗಿಲ್ಲ. ಅದು ಹಾಗೆಯೇ ಇದೆ. ನಾಲ್ಕು ಸಾವಿರ ವರ್ಷಗಳ ಹಿಂದೆ ಇದ್ದಂತೆಯೇ ಇದೆ. ಆರ್ಥಿಕವಾಗಿ ಅವರು ಮೇಲೆ ಬರಬೇಕಾದರೆ ಅವರಿಗೆ ವಿದ್ಯಾಭ್ಯಾಸಕ್ಕೆ ಹೆಚ್ಚು ಸಹಾಯ ಮಾಡಬೇಕು ಮತ್ತು ಆ ರೀತಿ ಹಣವನ್ನು ಖರ್ಚು ಮಾಡದೆ ಇರುವುದರ ಬಗ್ಗೆ ಒಂದು ಪ್ರೊಬ್ ಮಾಡುವುದಾದರೆ ಸ್ವಲ್ಪ ಬೆಳಕನ್ನು ಚೆಲ್ಲೀತು.

ಯಾವ ಅಧಿಕಾರಿಗಳಿಗೆ ಈ ಜನತೆಯ ಸೇವೆ ಮಾಡತಕ್ಕ ಮನೋಭಾವವಿಲ್ಲ ಅವರನ್ನು ಇಲ್ಲ ಹಾಕಿದರೆ ಅವರಿಂದ ಏನೂ ಕೆಲಸವಾಗುವುದಿಲ್ಲ. ಒಳ್ಳದವರಿಗೆ, ಯಾರಿಗೆ ಈ ಜನರಿಗೆ ಸೇವೆ ಮಾಡತಕ್ಕುದರಲ್ಲಿ ವಿಶ್ವಾಸವಿಲ್ಲ ಅಂಥ ಜನರನ್ನು ಸಮಾಜ ಕಲ್ಯಾಣ ಶಾಖೆಯ ಹುದ್ದೆಗಳಲ್ಲಿ ಕೂಡಿಸಿ

(ಶ್ರೀ ಎಸ್. ಗೋಪಾಲಗೌಡ)

ದರೆ ಏನೂ ಪ್ರಯೋಜನವಿಲ್ಲ. ಈಗ ಅಲ್ಲಿರುವ ಡೈರೆಕ್ಟರನ್ನು ಕುರಿತು ನಾನು ಹೇಳುತ್ತಿಲ್ಲ. ಸರ್ಕಾರ ಈ ಜನರ ಬಗ್ಗೆ ಬಹಳ ಮುತುವರ್ಜಿ ವಹಿಸಬೇಕು. ಈ ಹಣವನ್ನು ಖರ್ಚು ಮಾಡುವಾಗ ಪ್ರಾಮಾಣಿಕವಾಗಿ ಆ ಜನ ಮೇಲೆ ಬರಬೇಕು, ಅವರಿಗೆ ಮೀಸಲಾಗಿಟ್ಟಿರತಕ್ಕ ಹಣ ಅವರಿಗೆ ಸಲ್ಲಬೇಕು ಎನ್ನುವ ವಿಶ್ವಾಸವಿರುವ ಜನರನ್ನು ಮಾತ್ರ ಆ ಕೆಲಸಗಳಿಗೆ ಹಾಕಬೇಕು ಎಂದು ಹೇಳಿ, ಸರ್ಕಾರದವರು ಈ ಪ್ರಶ್ನೆಗೆ ಏನು ಉತ್ತರ ಕೊಟ್ಟಿದ್ದಾರೆ ಅದರಿಂದ ಸಮಾಧಾನವಾಗಿಲ್ಲ ಎನ್ನುವ ಮಾತನ್ನು ತಿಳಿಸುತ್ತೇನೆ, ಸ್ವಾಮಿ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್ (ಸಿರಸಿ).—ನನ್ಮಾನ್ಯ ಸಭಾಧ್ಯಕ್ಷರೇ, ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಸರ್ಕಾರ ಹರಿಜನ ಗಿರಿಜನರ ವಿವಿಧ ಸಮಸ್ಯೆ ಪರಿಹಾರ ಕ್ಕಾಗಿ, ಸಿಗದಿ ಮಾಡಿದ್ದ ಹಣದಲ್ಲಿ ಸುಮಾರು 20 ಲಕ್ಷ ರೂಪಾಯಿಗಳನ್ನು ಸರ್ಕಾರ ಲ್ಯಾಪ್ಸ್ ಮಾಡಿರತಕ್ಕುದಕ್ಕೆ ಮುಖ್ಯ ಕಾರಣ ಇಲಾಖೆಯ ಆಡಳಿತ ವರ್ಗದಲ್ಲಿ ದಕ್ಷತೆ ಇಲ್ಲದಿರುವುದು. ಪ್ರತಿ ವರ್ಷ ದಲ್ಲಿಯೂ ಮಾರ್ಚ್ ತಿಂಗಳ ಕೊನೆ ವಾರದಲ್ಲಿ ಗ್ರಾಂಟನ್ನು ತಾಲೂಕುಗಳಿಗೆ ಮತ್ತು ಜಿಲ್ಲೆಗಳಿಗೆ ಆರಾಟ್ ಮಾಡಿ ಅದನ್ನು ವಿತರಣೆ ಮಾಡುತ್ತಿರುವುದು "ಹಣ ಲ್ಯಾಪ್ಸ್" ಆಗುವುದಕ್ಕೆ ಮೂಲ ಕಾರಣ. ಅಲ್ಲದೆ ಸೀನಿಯರ್ ದರ್ಜೆಯ ಒಬ್ಬ ಡೆಪ್ಯುಟಿ ಕಮಿಷನರನ್ನು ಡೈರಕ್ಟರಾಗಿ ನೇಮಿಸದೆ ಇರುವುದರಿಂದ ಹರಿಜನರ ಗಿರಿಜನರ ಸಮಸ್ಯೆಗಳನ್ನು ಸುಲಭವಾಗಿ ಬಿಡಿಸಲು ಆಗದೆ ಇರುವುದಕ್ಕೆ ಅವಕಾಶವಾಗಿದೆ. ಹರಿಜನ ಗಿರಿಜನರಿಗೆ ಸಂಬಂಧಪಟ್ಟ ಅನೇಕ ಸಮಸ್ಯೆಗಳನ್ನು ನಾವೆ ಸರ್ಕಾರದ ಮುಂದೆ ಇಟ್ಟಾಗ ಗ್ರಾಂಟ್ ಇಲ್ಲ ಎಂದು ಸರ್ಕಾರ ಹೇಳುತ್ತದೆ. ಈ ರೀತಿ ಲ್ಯಾಪ್ಸ್ ಮಾಡುವ ಲೋಪವನ್ನು ಮಾಡಿರುವವರು ರಾಜ್ಯಾಂಗಕ್ಕೆ ದ್ರೋಹ ಮಾಡಿದ್ದಾರೆ. ನಿಮ್ಮ ವರ್ಗಕ್ಕೆ ಇರತಕ್ಕ ಹಕ್ಕುಬಾಧ್ಯತೆಗಳನ್ನು, ವಿಶೇಷ ರಿಯಾಯಿತಿಗಳನ್ನು ಪೊಟಕು ಮಾಡತಕ್ಕ ನೀತಿಯಿಂದ ಕೂಡಿದವರಾಗಿದ್ದಾರೆ. 28 ಜನರ ಮಂತ್ರಿಮಂಡಲದಲ್ಲಿ ನಮ್ಮ ರಕ್ಷಣೆ ಆಗಿದೆಯೇ? ಕೇವಲ ಇಬ್ಬರನ್ನು ಮಂತ್ರಿಮಂಡಲಕ್ಕೆ ತೆಗೆದುಕೊಂಡಿದ್ದೀರಿ. ನಮಗೆ ಸರಿಯಾದ ಪ್ರಾತಿನಿಧ್ಯವನ್ನು ಎಲ್ಲೂ ಕಡೆಯೂ ಕೊಡದೆ ಇದ್ದರೆ ರಾಜ್ಯದಲ್ಲಿರುವ 40 ಲಕ್ಷ ಜನರು ಹಕ್ಕುಭಾಧ್ಯತೆಗಳ ರಕ್ಷಣೆಗೆ ದಂಗೆ ಎದ್ದಾರು. ಈ ವಿಷಯದಲ್ಲಿ ನಾನು ಸರ್ಕಾರಕ್ಕೆ ಮನವಿಪೂರ್ವಕವಾಗಿ ನಿವೇದಿಸುತ್ತಿದ್ದೇನೆ. ನಾಲ್ಕನೆಯ ಯೋಜನೆಯಲ್ಲಿ 440 ಕೋಟಿ ರೂಪಾಯಿಗಳನ್ನು ಪೆಚ್ಚೆ ಮಾಡಲು ಯೋಚಿಸಲಾಗು ತ್ತಿದೆ. ಇದರಲ್ಲಿ ನೂರಕ್ಕೆ 18 ಭಾಗದಷ್ಟು ಹಣವನ್ನು ಎಲ್ಲ ಯೋಜನೆಗಳಲ್ಲಿಯೂ ಹರಿಜನ ಗಿರಿಜನರಿಗೆ ಒದಗಿಸಿಕೊಡಬೇಕು, ಅವರಿಗೆ ಅನ್ನ, ವಸತಿ, ಬಟ್ಟೆ, ವಿದ್ಯಾಭ್ಯಾಸ ಮತ್ತು ಅವರ ಕಷ್ಟ ನಿವಾರಣೆಗೆ ಯೋಜನೆಗಳನ್ನು ತಯಾರು ಮಾಡಬೇಕು ಈ ಮನವಿಯನ್ನು ಮಾನ್ಯ ಆರ್ಥ ಸಚಿವರ ಮುಂದೆ ಮನವಿ ಮಾಡಿಕೊಳ್ಳುತ್ತೇನೆ. ಪ್ಲಾನಿಂಗ್ ಬೋರ್ಡಿನಲ್ಲಿ ಒಬ್ಬ ಹರಿಜನ ಸದಸ್ಯರನ್ನು ಸೇರಿಸಿ ತೆಗೆದುಕೊಂಡಿಲ್ಲ. ಇಂಥ ಲೋಪವನ್ನು ಈಗಲಾದರೂ ಸರಿಮಾಡಬೇಕು, ರಾಷ್ಟ್ರದ ಬೆನ್ನು ಮೂಳೆಯಂತಿರುವ ಹರಿಜನ ಗಿರಿಜನರಿಗೆ ಹೆಚ್ಚಿನ ಅನುಕೂಲಗಳು ದೊರೆಯು ಬೇಕು. ಅವರ ಕಲ್ಯಾಣಕ್ಕಾಗಿ ಕೆಲಸ ಮಾಡಿ ಆಗಿರುವ ಲೋಪವನ್ನು ಸರಿಪಡಿಸಬೇಕು, ಇದರಿಂದ ಸುಖೀ ರಾಜ್ಯ ಸ್ಥಾಪನೆ ಮಾಡಲು ಅವಕಾಶವಾಗುತ್ತದೆ ಅದು ಕಾರ್ಯಗತವಾಗಲೆಂದು ಮನವಿ ಮಾಡಿಕೊಳ್ಳುತ್ತೇನೆ. ಹರಿಜನ ಗಿರಿಜನರ ಸಮಸ್ಯೆ ರಾಷ್ಟ್ರದ ಸಮಸ್ಯೆ. ಅದನು ಬಿಡಿಸಲಕ್ಕೇ ಶ್ರಮಿಸಬೇಕು. ಇದಕ್ಕೆ ಪ್ರಥಮ ಪ್ರಾಶಸ್ತ್ಯವನ್ನು ಸರ್ಕಾರ ಕೊಡಬೇಕೆಂದು ಹೇಳುತ್ತೇನೆ. ಹರಿಜನ ಗಿರಿಜನರಿಗೆ ಈಗ ಆಗಿರುವ ಅನ್ಯಾಯಗಳನ್ನು ಸರಿಪಡಿಸಬೇಕೆಂದು ಮಾನ್ಯ ಮಂತ್ರಿ ಗಳನ್ನೂ ಸರ್ಕಾರವನ್ನೂ ಮತ್ತೊಮ್ಮೆ ಬೇಡಿಕೊಂಡು ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಎಚ್. ಎನ್. ನಂಜೇಗೌಡ (ಅರಕಲಗೂಡು). —ಸ್ವಾಮಿ, ಸೇಕಡ 11 ರಿಂದ 12 ರ ವರೆಗೆ ಈ ಬಾಬಿನಲ್ಲಿ ದುಡ್ಡು ಲ್ಯಾಪ್ಸ್ ಆಗಿದೆ. ನಮ್ಮ ಸರ್ಕಾರ ಹಾಗೂ ಕೇಂದ್ರ ಸರ್ಕಾರ ಇದಕ್ಕೆ ಹಣ ಕೊಟ್ಟರೂ ಕೂಡ ಇದು ಸ್ಟೇಟ್ ಏಡೆಡ್ ಪ್ಲಾನ್ ಸೀಲಿಂಗ್‌ನಲ್ಲಿ ಬರುತ್ತದೆ. ಇದರಲ್ಲಿ ಒಂದು ಚಿಂತಾಜನಕವಾದ ವಿಷಯವೇನೆಂದರೆ ಎಕನಾಮಿಕ್ ಅಪ್‌ಲಿಫ್ಟ್‌ಮೆಂಟ್ ಎಂದು ಹೇಳುತ್ತ ಎಜುಕೇಷನಲ್ ಹೆಡ್‌ನಲ್ಲಿ, ಹೆಲ್ತ್, ಹೌಸಿಂಗ್ ಮತ್ತು ಇತರ ಸ್ಕೀಮುಗಳಲ್ಲಿ ಇದಕ್ಕಾಗಿ ಒದಗಿಸಿದ್ದ ಹಣದಲ್ಲಿ ಐದು ಲಕ್ಷ ರೂಪಾಯಿಗಳನ್ನು ಲ್ಯಾಪ್ಸ್ ಮಾಡಿರುವುದು ಅಕ್ಷಮ್ಯ ಅಪರಾಧ. ಇದರಲ್ಲಿ ಖರ್ಚು ಮಾಡುವುದಕ್ಕೆ ಅಂಥ ಕಷ್ಟವಾಗುವುದಿಲ್ಲ. ಒಂದು ಪ್ರಾಮುಖ್ಯವಾದ ಅಂಶವೇನೆಂದರೆ ಯಾವ ಏಜೆನ್ಸಿ ಮುಖಾಂತರ ವಿಚಾರಣೆ ನಡೆಸುತ್ತೀರೋ ಗೊತ್ತಿಲ್ಲ? ನಾನು ಕೂಡ ತಾಲ್ಲೂಕು ಮಟ್ಟದಲ್ಲಿ ಇಂಥ ವಿಷಯಗಳಲ್ಲಿ ಅನೇಕ ವಹಿಸಿ ಕೆಲಸ ಮಾಡುವವನು.

6-30 P. M.

ಈ ಹಣ ವಿತರಣೆ ಮಾಡುವಾಗ ಏನಾಗುತ್ತದೆ ಎಂಬುದು ನನಗೆ ಗೊತ್ತಿದೆ. ನನ್ನ ತಾಲ್ಲೂಕಿನ ವಿಚಾರ ಹೇಳುವುದಾದರೆ ಇದರಲ್ಲಿ ಇಂಟರೆಸ್ಟೆಡ್ ಪಾರ್ಟಿಗಳು ಇರುವುದರಿಂದ 100ಕ್ಕೆ 50 ಭಾಗದಷ್ಟು ಹಣ ಬೋಗಸ್ ಆಗಿ ಖರ್ಚಾಗುತ್ತದೆ. 8-10 ಜನರ ಸಿಗ್ನೇಚರ್‌ಹಾಕಿಸಿ 4 ಜನಕ್ಕೆ ಕೊಡುತ್ತಾರೆ. ಈ ರೀತಿಯಾಗಿ ಹಣ ಸರಿಯಾಗಿ ವಿತರಣೆಯಾಗುವುದಿಲ್ಲ. ಇದರಿಂದ ಬಹಳ ಅನ್ಯಾಯವಾಗುವುದಿಲ್ಲವೇ ! ಭ್ರಷ್ಟಾಚಾರವಾದಂತಾಗುವುದಿಲ್ಲವೇ ! ಇಂತಹ ಸ್ಕೀಮ್‌ಗಳು ಏಕೆ ಇರಬೇಕು ?

ಶ್ರೀಮತಿ ಬಸವರಾಜೇಶ್ವರಿ.—ಮಾನ್ಯ ಸದಸ್ಯರು ಒಂದು ಮಾತು ತಿಳಿಯಬೇಕು ಎಂ.ಸಿ.ಆರ್.ಪಿ. ಪ್ರಾಜೆಕ್ಟ್‌ನಲ್ಲಿ ಎತ್ತುಗಳನ್ನು ಕೊಡುವುದು ಮತ್ತೆ ಅವರಿಗೆ ಇನ್ನೂ ಅನೇಕ ಸೌಲಭ್ಯಗಳನ್ನು ಒದಗಿಸಿಕೊಡುವುದೂ ಇದೆ. ಈ ರೀತಿ ಒಂದು ಇಂಟಿಗ್ರೇಟೆಡ್ ಸ್ಕೀಂ ಹಾಕಿದ್ದೇವೆ ಆ ಸ್ಕೀಂನಲ್ಲಿ ಅವರಿಗೆ ಬೇಕಾದ ಜಮೀನು ಎತ್ತು ವಗೈರೆ ಕೊಡುತ್ತೇವೆ ಇದಕ್ಕೆ 2 ಲಕ್ಷ ರೂಪಾಯಿ ಖರ್ಚು ಮಾಡುತ್ತಾ ಇದ್ದೇವೆ. ಅದಕ್ಕಾಗಿ ಸ್ವಲ್ಪ ತಡವಾಯಿತು.

ಇನ್ನು ಆರ್ಕಿಟೆಕ್ಚರಲ್ ಕಾಲೋನಿ ವಿಷಯ ಹೇಳಿದ್ದಾರೆ. ಒಂದೇಸಾರಿ ಎಷ್ಟು ಸ್ಕೀಂಗಳನ್ನು ಹಾಕಿಕೊಂಡಿರುತ್ತೇವೋ ಅಷ್ಟಕ್ಕೂ ಕೂಡ ಪೂರ್ತಿ ಖರ್ಚಾಗುವುದಿಲ್ಲ. ಜಮೀನು, ಕಟ್ಟಡದ ಮೇರೆ ಹಾಕಿರುತ್ತೇವೆ. ಅಲ್ಪ ಸ್ವಲ್ಪ ದುಡ್ಡು ಉಳಿದಿದೆ. ಎಂ.ಸಿ.ಆರ್.ಪಿ. ಪ್ರಾಜೆಕ್ಟ್ ತೆಗೆದುಕೊಂಡಲ್ಲಿ ಬಹಳಮಟ್ಟಿಗೆ ಹಣ ದುರ್ವ್ಯಯ ಆಗಲಿಕ್ಕೆ ಇಲ್ಲ. ಎಲ್ಲ ಸವಲತ್ತುಗಳನ್ನೂ ಕೊಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದನ್ನು ಸದಸ್ಯರ ಗಮನಕ್ಕೆ ತರುತ್ತೇನೆ.

ಶ್ರೀ ಎ. ಮುನಿಯಪ್ಪ (ಬಾಗೇಪಲ್ಲಿ).—ಒಂದು ಸೊಸೈಟಿ ರಿಜಿಸ್ಟರ್ ಮಾಡಬೇಕಾದರೆ 2 ಸಾವಿರ ರೂಪಾಯಿ ಡಿಪಾಸಿಟ್ ಕಟ್ಟಬೇಕು. ಆ ಡಿಪಾಸಿಟ್ ಮಾಡದೇ ಹೋದರೆ ರಿಜಿಸ್ಟರ್ ಆಗುವ ಹಾಗಿಲ್ಲ. ಸೊಸೈಟಿ ರಿಜಿಸ್ಟರ್ ಆಗದೇ ಹೋದರೆ ದುಡ್ಡು ಕೊಡುವ ಹಾಗಿಲ್ಲ. ಈ ರೀತಿ ಇದೆ.

ಶ್ರೀ ಎಚ್. ಎನ್. ನಂಜೇಗೌಡ.—ಇನ್ನು ಹರಿಜನರ ಹಾಸ್ಟಲುಗಳಿಗೆ ಸೇಕಡ 50 ರಷ್ಟು ವಿದ್ಯಾರ್ಥಿಗಳು ಬರಲಿಲ್ಲ ಎಂದು ಹೇಳಿದ್ದಾರೆ. ಹರಿಜನರು ಮತ್ತು ಗಿರಿಜನರ ಹಾಸ್ಟಲುಗಳಿಗೆ 100 ವಿದ್ಯಾರ್ಥಿಗಳಿಗೆ ಎಷ್ಟು ಗ್ರಾಂಟು ಕೊಡಬೇಕೋ ಅಷ್ಟು ಕೊಟ್ಟರೂ 25 ಸೀಟುಗಳು ಫಿಲಪ್ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಇದನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರೂ ಕೂಡ ಸಫಲವಾಗಲಿಲ್ಲ, ಹರಿಜನ ವಿದ್ಯಾರ್ಥಿಗಳು ಬರುವುದಿಲ್ಲ ಎಂದು ಅವರೂ ಹೇಳುತ್ತಾರೆ ಮತ್ತು ವಿದ್ಯಾರ್ಥಿಗಳಿಗೆ ಕೊಡತಕ್ಕ ವಿಷಯದಲ್ಲಿ ಏನು ಒಂದು ಅವಾರ್ಡ್ ಇದೆಯೋ ಅದೂ ನಿಧಾನವಾಗುತ್ತಿದೆ ಮತ್ತು ಕಾಂಪನ್ಸೇಷನ್ ವಿಚಾರದಲ್ಲೂ ನಿಧಾನವಾಗುತ್ತಿದೆ ಜನರಲ್ ಹಾಸ್ಟಲ್‌ನಲ್ಲಿ ಹರಿಜನರು ಮತ್ತು ಗಿರಿಜನರಿಗೆ ಸೀಟುಗಳನ್ನು ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಇನ್ನು ಜಿಲ್ಲಾಧಿಕಾರಿಗಳ ಕೈಕೆಳಗೆ ಡಿಸ್ಟ್ರಿಕ್ಟ್ ಸೋಷಿಯಲ್ ವೆಲ್‌ಫೇರ್ ಆಫೀಸರು ಇರುತ್ತಾರೆ. ನನ್ನ ಅನುಭವದಲ್ಲಿ ಇಂತಹ ಸಂಸ್ಥೆಗೆ ಏನು ಒಂದು ಗಮನವನ್ನೂ ಕೊಡುವುದಿಲ್ಲ. ಅವರನ್ನು ತೆಗೆದುಹಾಕಿ, ಏಕೆಂದರೆ ಅವರು ಬೇಕಾದಷ್ಟು ಮೀಟಿಂಗ್‌ಗಳಿಗೆ ಹೋಗಬೇಕಾಗುತ್ತದೆ, ಅಂದರೆ ಫುಡ್ ಮೀಟಿಂಗ್, ಎನ್. ಡಿ. ಸಿ. ಮೀಟಿಂಗ್ ಮಂತ್ರಿಗಳು ನಡೆಸತಕ್ಕಂಥ ಮೀಟಿಂಗ್‌ಗಳಿಗೆ ಹೋಗುವ ಕೆಲಸವೇ ಜಾಸ್ತಿಯಾಗಿ ಬೇರೆ ಯಾವ ಕೆಲಸಕ್ಕೂ ಗಮನ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ಜಿಲ್ಲಾಧಿಕಾರಿಗಳ ಕೈಕೆಳಗೆ ಡಿಸ್ಟ್ರಿಕ್ಟ್ ಸೋಷಿಯಲ್ ವೆಲ್‌ಫೇರ್ ಆಫೀಸರು ಇರುವುದರ ಬದಲು ಈ ಕೆಲಸವನ್ನು ನೋಡಿಕೊಳ್ಳಲು ಪ್ರತ್ಯೇಕವಾಗಿ ಒಬ್ಬ ಆಫೀಸರನ್ನು ನೇಮಕ ಮಾಡಿ ಅವರಿಗೆ ಈ ಕೆಲಸವನ್ನು ವಹಿಸಬೇಕು ಎಂದು ನಾನು ಸೂಚಿಸುತ್ತೇನೆ.

†ಶ್ರೀ ವಸಂತರಾವ್ ಪಾಟೀಲ್ (ಸಮಾಜ ಕಲ್ಯಾಣ ಶಾಖೆಯ ಮಂತ್ರಿಗಳು).—ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರು ಇವತ್ತು ಕಳಕಳಿಯಿಂದ ಮತ್ತು ಉಗ್ರವಾದ ಟೀಕೆ ಮಾಡಿ ಕೆಲವು ಸಲಹೆಗಳನ್ನು ಕೊಟ್ಟರು. ಅವರು ಹೇಳಿದಂಥಾದ್ದನ್ನು ಲಕ್ಷದಲ್ಲಿಟ್ಟುಕೊಂಡು ಮುಂದಿನ ಸಾರಿ ಸಾಧ್ಯವಾದಷ್ಟು ಪರಿಶೀಲನೆ ಮಾಡಿ ಹಣ ಲೋಪವಾಗದೇ ಇದ್ದ ಹಾಗೆ ನೋಡಿಕೊಳ್ಳುತ್ತೇನೆ ಎಂದು ಆಶ್ವಾಸನೆಯನ್ನು ಕೊಡುತ್ತೇನೆ. ಆದರೆ ಹಿಂದಿನ ಪಂಚವಾರ್ಷಿಕ ಯೋಜನೆ ಕಡೆ ಸ್ವಲ್ಪ ನೋಡಲಾಗಿ ಆವಾಗ ನಮ್ಮ ದೇಶ ಒಂದು ವಿಶಿಷ್ಟವಾದ ಪರಿಸ್ಥಿತಿಯಲ್ಲಿತ್ತು. ಅದನ್ನು ಮರೆಯಬಾರದು. ಎಮರ್ಜೆನ್ಸಿ ಪರಿಸ್ಥಿತಿಯಲ್ಲಿದ್ದಾಗ ಕೆಲವು ಹಾಸ್ಟಲುಗಳಿಗೆ ಏನು ಒಂದು ಹಣವನ್ನು ಸರ್ಕಾರ ಮಂಜೂರು ಮಾಡಬೇಕಾಗಿತ್ತೋ ಅದನ್ನು ಕೊಡಬಾರದು ಎನ್ನುವ ಆದೇಶ ಇದ್ದುದರಿಂದ ಕೆಲವು ಹಾಸ್ಟಲುಗಳಿಗೆ ಮಂಜೂರು ಮಾಡಲು ಸಾಧ್ಯವಾಗಲಿಲ್ಲ. ಇದನ್ನು ತಾವು ಮರೆಯಬಾರದು.

(ಶ್ರೀ ವನಂತರಾವ್ ಪಾಟೀಲ್)

ಎರಡನೆಯದಾಗಿ,ಹರಿಜನರು ಮತ್ತು ಗಿರಿಜನರು ಬಹಳ ಹಿಂದುಳಿದಿದ್ದಾರೆ ಎಂದು ತಮಗೆಲ್ಲರಿಗೂ ಗೊತ್ತಿದೆ. ಹಳ್ಳಿಗಳಲ್ಲಿಯೂ ಕೂಡ ಕಡೆಯ ಸ್ಥಳದಲ್ಲಿ ಜನರ ಸಂಪರ್ಕ ಇಲ್ಲದಂಥ ಕಡೆ ಇದ್ದುದು ತಮಗೆಲ್ಲರಿಗೂ ಗೊತ್ತು. ಅವರಿಗೆ ಸೌಲಭ್ಯಗಳನ್ನು ಮಾಡಿಕೊಡಿ ಎಂದು ನವಸ್ಯರು ಹೇಳುತ್ತಾರೆ. ಅವಶ್ಯವಾಗಿ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಸೌಲಭ್ಯಗಳನು ಒದಗಿಸಿಕೊಟ್ಟಿದೆ. ಕೆಲವು ಕಡೆ ಸೌಲಭ್ಯಗಳನ್ನು ಒದಗಿಸಿಕೊಡುವುದಕ್ಕೆ ಸಾಧ್ಯವಾಗದೇ ಇರಬಹುದು. ಉದಾಹರಣೆಗಾಗಿ ಹರಿಜನರು ಮತ್ತು ಗಿರಿಜನರು ಹೆಚ್ಚು ಪ್ರಮಾಣದಲ್ಲಿ ಕಲಿಯದೇ ಇರುವುದರಿಂದ ಹಾಸ್ಟೆಲುಗಳಿಗೆ ವಿದ್ಯಾರ್ಥಿಗಳು ಬಾರದೇ ಇರುವುದಕ್ಕೆ ಕಾರಣವಾಗಿದೆ, ಅದನ್ನು ಮರೆಯುವಾರದು ನನಗೆ ಇದರ ವಿಚಾರ ಗೊತ್ತು.

ಮೊದಲನೆಯ ವರ್ಷ ಬಾಲಕರನ್ನು ಸೇರಿಸಲು ಅರ್ಜಿಗಳನ್ನು ಹೆಚ್ಚು ಸಂಖ್ಯೆಯಲ್ಲಿ ತೆಗೆದುಕೊಂಡದ್ದು ನವಸ್ಯರಿಗೆ ಗೊತ್ತಿರಬೇಕು. ಹಾಗೆ ತೆಗೆದುಕೊಳ್ಳುವಾಗ ಬಹಳ ಹಿಂದುಳಿದ ಭಾಗದಲ್ಲಿ ಸಾಕಷ್ಟು ಜನರು ಮುಂದೆ ಬರಲಿಲ್ಲ ಎನ್ನುವುದನ್ನು ತಾವು ಇದನ್ನು ಮರೆಯಬಾರದು. ಇಷ್ಟೇ ಅಲ್ಲ. ಈ ವರ್ಷದಲ್ಲಿ ಸ್ಥಳ ದೊರಕಿಸುವ ಸಲುವಾಗಿ ಎಷ್ಟು ತೊಂದರೆಯಾಗಿದೆ ಎನ್ನುವುದನ್ನೂ ಮರೆಯಿಕೂಡದು. ಜನರ ಕಷ್ಟವೂ ಗೊತ್ತಿದೆ. ಆದುದರಿಂದ ತಮ್ಮ ಪಟ್ಟಿಯಲ್ಲಿ ಕೊಟ್ಟಿರುವ ಪ್ರಕಾರ ನಿಜವಾಗಿ ತೊಂದರೆ ಇದೆ. ಅದನ್ನು ವಿಚಾರ ಮಾಡುವುದು ಅವಶ್ಯಕ. ಯೋಜನೆಗಳನ್ನು ಬೇಕಾದಷ್ಟು ಹಾಕಿಕೊಳ್ಳಬಹುದು. ಆ ಯೋಜನೆಗಳು ಅಮಲ್‌ನಲ್ಲಿ ಬರುವುದು ಕಷ್ಟ. ಹಾಗೆಯೇ ಸರ್ಕಾರದ ಯೋಜನೆಗಳು ಬೇಕಾದಷ್ಟು ಇವೆ. ಅವು ಪೂರ್ಣ ಅಮಲ್‌ನಲ್ಲಿ ಬರುತ್ತವೆ ಎಂದು ಹೇಳುವುದು ಕಷ್ಟ. ಯೋಜನೆ ಇರುತ್ತದೆ. ಆದರೆ ಮುಖ್ಯವಾಗಿ ಕಾರ್ಯಕರ್ತರು ಇರಬೇಕು. ಆದುದರಿಂದ ಪ್ರತಿಯೊಬ್ಬ ನವಸ್ಯರೂ ಪ್ರಯತ್ನ ಮಾಡಿ ತಮ್ಮ ತಮ್ಮ ಭಾಗದಲ್ಲಿ ತಮ್ಮ ತಮ್ಮ ತಾಲ್ಲೂಕಿನಲ್ಲಿ ಇರುವಂಥ ಹಿಂದುಳಿದ ಜನರ ಅಭಿವೃದ್ಧಿಗಾಗಿ ಹಾಕಿರುವ ಯೋಜನೆಗಳನ್ನು ಕಾರ್ಯಗತವಾಗುವು ಸಹಕರಿಸಬೇಕು. ಯಾವ ಉದ್ದೇಶದಿಂದ ಸರ್ಕಾರದವರು ಒಂದು ಯೋಜನೆಯನ್ನು ಹಾಕಿಕೊಂಡು ಪ್ರಾರಂಭವಾಡುತ್ತಾರೋ ಅದು ಕಾರ್ಯಗತ ಆಗದೇ ಇದ್ದರೆ ಸರ್ಕಾರದ ತಪ್ಪು ಎಂದು ಹೇಳಲಿಕ್ಕೆ ಬರುವುದಿಲ್ಲ. ಎಲ್ಲೆಲ್ಲಿ ಯೋಜನೆ ಹಾಕಿ ಪ್ರಾರಂಭ ಮಾಡುತ್ತಾರೋ ಮತ್ತು ನವಸ್ಯರು ಯಾವ ಯಾವ ಯೋಜನೆಗಳನ್ನು ಸರ್ಕಾರದ ಮುಂದೆ ಇಡುತ್ತಾರೋ, ಅವೆಲ್ಲವನ್ನೂ ಕಾರ್ಯಗತ ಮಾಡಲು ಮಾನ್ಯ ನವಸ್ಯರು ಸಹಕರಿಸಬೇಕು. ಅಂಥಹ ಯೋಜನೆಗಳಲ್ಲಿ ಯಶಸ್ವಿಯಾಗಲು ಸರ್ಕಾರದವರು ಕೈಲಾದಷ್ಟು ಪ್ರಯತ್ನ ಮಾಡುತ್ತಾರೆಂದು ಭರವಸೆ ಕೊಡುತ್ತೇನೆ.

ಶ್ರೀ ಎಸ್. ಗೋಪಾಲಗೌಡ.—ದೇವರು ವರ ಕೊಟ್ಟರೂ ಪೂಜಾರಿ ವರ ಕೊಡ ಎಂದು ಹಾಗೆ ಹಣ ಇದ್ದು ಖರ್ಚಾಗದೇ ಹೋದರೆ ನಿಮಗೆ ಸಮಾಧಾನವೇ ?

ಶ್ರೀ ವನಂತರಾವ್ ಪಾಟೀಲ್.—ಆಫೀಸರದ್ದೇ ಆಗಲಿ, ಸರ್ಕಾರದ್ದೇ ಆಗಲಿ, ಯಾರದೆ್ದೇ ತಪ್ಪು ಇರಲಿ, ಇದ್ದ ಪರಿಸ್ಥಿತಿಯನ್ನು ತಮ್ಮ ಮುಂದೆ ಇಟ್ಟು ತಮ್ಮೆಲ್ಲರ ಸಹಕಾರ ಕೇಳುತ್ತೇನೆ.

Sri H. N. NANJE GOWDA.—Sir, we have given certain suggestions to the hon'ble Minister regarding accommodation of Harijan students, etc., for which we expected a direct answer. But the Hon'ble Minister is giving answers of a general nature.

Mr. SPEAKER.—Hon'ble Minister has sufficiently explained the points raised. The House will now rise to meet again at 8-30 A.M. tomorrow.

———

The House adjourned at Forty-two Minutes past Six of the Clock to meet again at Thirty Minutes past Eight of the Clock on Saturday the 14th September 1968.

———